# ಚಾತುರ್ಮಾಸ್ಯ ವ್ರತ

ಚಾತುರ್ಮಾಸ್ಯ ವ್ರತವನ್ನು ಸರ್ವರೂ ಕಡ್ಡಾಯವಾಗಿ ಆಚರಿಸಲೇಬೇಕು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ವಿಧವೆ, ರಜಸ್ವಲೆ,ಬ್ರಹ್ಮಚಾರಿ, ಸನ್ಯಾಸಿ, ಇತ್ಯಾದಿ ಎಲ್ಲರೂ ಮಾಡಲೇಬೇಕು.

**ವ್ರತ ಮಾಡಿದರೆ ಮಹಾ ಪುಣ್ಯ. ಮಾಡದಿದ್ದರೆ ಮಹಾದೋಷ**

## ಚಾತುರ್ಮಾಸ್ಯದ ಕರ್ತವ್ಯಗಳು –

ಸತ್ಸಂಗ, ದ್ವಿಜಭಕ್ತಿ, ಗುರುದೇವಾಗ್ನಿತರ್ಪಣ, ಗೋದಾನ, ವೇದಪಾಠ, ಸತ್ಕ್ರಿಯ, ಸತ್ಯಭಾಷಣ, ಗೋಭಕ್ತಿ, ದಾನ, ಭಕ್ತಿ

***ಆರಂಭ – ಆಷಾಡ ಶುಕ್ಲ ಏಕಾದಶಿಯ ದಿನ ಚಾತುರ್ಮಾಸ್ಯವನ್ನು ಪ್ರಾರಂಭಿಸಬೇಕು.***

***ಮುಕ್ತಾಯ – ಕಾರ್ತೀಕ ಶುದ್ಧ ಏಕಾದಶಿ***

**ಮಾಡಬಾರದ್ದು** – ಈ ಕಾಲದಲ್ಲಿ ಪರಮಾತ್ಮನು ಯೋಗನಿದ್ರೆಯನ್ನು ಪ್ರಕಟಿಸುವನು. ಪರಮಾತ್ಮನು ಶಯನಾವಸ್ಥೆಯನ್ನು ತೋರುವುದರಿಂದ ವಿವಾಹ, ಚೌಲ, ಉಪನಯನ, ಗೃಹಪ್ರವೇಶ, ಇತ್ಯಾದಿಗಳನ್ನು ಆಚರಿಸಬಾರದು.

**ಶಯನ್ಯೈಕಾದಶಿ – ವ್ರತಸಂಕಲ್ಪ** – ಆಷಾಡಶುಕ್ಲ ಏಕಾದಶಿಯಂದು ತಪ್ತ ಮುದ್ರಾಧಾರಣೆಯನ್ನು ಮಾಡಿಸಿಕೊಂಡು ಚಾತುರ್ಮಾಸ್ಯ ವ್ರತದ ಸಂಕಲ್ಪವನ್ನು ಮಾಡಬೇಕು –

ವ್ರತಾನಾಂ ವಕ್ಷ್ಯಮಾಣಾನಾಂ ಸಂಕಲ್ಪಂ ವಿಧಿವತ್ ಚರೇತ್ ।
ನೈಮಿತ್ತಿಕಾನಾಂ ಕಾಮ್ಯಾನಾಂ ನಿತ್ಯಾನಾಂ ಚ ತಥೈವ ಚ ॥

**ಪ್ರಥಮ ಮಾಸ – ಶಾಕವ್ರತ**

**–ಆಷಾಡ ಶುಕ್ಲ ದ್ವಾದಶಿ – ಶ್ರಾವಣ ಶುಕ್ಲ ಏಕಾದಶಿ**

**ದ್ವಿತೀಯಮಾಸ – ದಧಿವ್ರತ**

**– (ಶ್ರಾವಣ ಶುಕ್ಲ ದ್ವಾದಶಿ – ಭಾದ್ರಪದ ಶುಕ್ಲ ಏಕಾದಶಿ)**

**ತೃತೀಯ ಮಾಸ – ಕ್ಷೀರವ್ರತ**

**– (ಭಾದ್ರಪದ ಶುಕ್ಲ ದ್ವಾದಶಿ – ಆಶ್ವೀಜ ಶುಕ್ಲ ಏಕಾದಶಿ)**

**ಚತುರ್ಥ ಮಾಸ – ದ್ವಿದಳ ಮತ್ತು ಬಹುಬೀಜವ್ರತ**

**– (ಆಶ್ವೀಜ ಶುಕ್ಲ ದ್ವಾದಶಿ – ಕಾರ್ತೀಕ ಶುಕ್ಲ ಏಕಾದಶಿ)**

## ಚಾತುರ್ಮಾಸ್ಯ ವ್ರತ ಸಂಕಲ್ಪ –

ಆಚಮನ, ಪ್ರಾಣಾಯಾಮ್ಯ – _____..ಶುಭತಿಥೌ, ____.ಸಂವತ್ಸರೇ, ದಕ್ಷಿಣಾಯನೇ, ಆಷಾಡಮಾಸೇ, ಶುಕ್ಲಪಕ್ಷೇ ಏಕಾದಶ್ಯಾಂ ವಾಸರೇ, ಶ್ರೀ ಚಾತುರ್ಮಾಸ್ಯದೇವತಾಭಿಮಾನಿ ಶ್ರೀಧರ, ಹೃಷೀಕೇಶ, ಪದ್ಮನಾಭ, ದಾಮೋದರರೂಪಾಣಾಂ, ಪ್ರೀತಿಂ ಕಾಮಯಮಾನ: ಚಾತುರ್ಮಾಸ್ಯ ವ್ರತಾಂಗ ಶಾಕವ್ರತ, ದಧಿವ್ರತ, ಕ್ಷೀರವ್ರತ, ದ್ವಿದಳವ್ರತಾಖ್ಯ, ಚತುರ್ವಿಧ ವ್ರತಂ ಸ್ವೀಕರಿಷ್ಯೇ ।

ಸುಪ್ತೇ ತ್ವಯಿ ಜಗನ್ನಾಥ ಜಗತ್ ಸುಪ್ತಂ ಭವೇದಿದಂ ।
ವಿಬುದ್ಧೇ ಚ ವಿಬುದ್ಧ್ಯೇವ ಪ್ರಸನ್ನೋ ಭವ ಮೇSಚ್ಯುತ।
ಚತುರೋ ವಾರ್ಷಿಕಾನ್ ಮಾಸಾನ್ ದೇವ ದೇವ ಜಗತ್ಪತೇ ।

ನಿರ್ವಿಘ್ನಂ ಸಿದ್ಧಿಮಾಯಾತು ಪ್ರಸಾದಾತ್ ತವ ಕೇಶವ ॥
ಗೃಹೀತೇಽಸ್ಮಿನ್ ವ್ರತೇ ದೇವ ಪಂಚತ್ವಂ ಯದಿ ಮೇ ಭವೇತ್ ।
ತದಾ ಭವೇತ್ ಸುಸಂಪೂರ್ಣಂ ಪ್ರಸಾದಾತ್ತೇ ಜನಾರ್ಧನ: ॥

**ಇತರ ವ್ರತಗಳು –**

**ಧಾರಣ–ಪಾರಣ ವ್ರತ** - ಎಂದರೆ ಒಂದು ದಿನ ಉಪವಾಸ, ಮಾರನೇ ದಿನ ಭೋಜನ. ಈ ವ್ರತವನ್ನು ನಾಲ್ಕೂ ತಿಂಗಳಲ್ಲೂ ಮಾಡಬೇಕು. ಅಶಕ್ಯವಾದಾಗ ಮೊದಲನೇ ಅಥವ ಕಡೆ ತಿಂಗಳಲ್ಲಾದರೂ ಒಂದು ತಿಂಗಳು ಧಾರಣ–ಪಾರಣ ಮಾಡಬಹುದು.

**ಕ್ರಮ** – ಉಪವಾಸದ ದಿನದಂದು ಪುಣ್ಯಾಹವಾಚನವನ್ನು ಅವಶ್ಯ ಮಾಡಲೇಬೇಕು. ಅನಂತರ ಸಂಕಲ್ಪ ಮಾಡಿ ವ್ರತವನ್ನು ಪ್ರಾರಂಭಿಸಬೇಕು. ಪಾರಣೇ ದಿನ ನೂರೆಂಟು ಬಾರಿ ಮೂಲಮಂತ್ರದಿಂದ ನಾರಾಯಣನಿಗೆ ಅರ್ಘ್ಯವನ್ನು ಬಿಟ್ಟು ನಂತರ ಭೋಜನ ಮಾಡಬೇಕು. ಈ ವ್ರತವನ್ನು ಮುಗಿಸಿದ ಮೇಲೆ ಉದ್ಯಾಪನವನ್ನು ಮಾಡಿ, ಲಕ್ಷ್ಮೀನಾರಾಯಣನ ಪ್ರತಿಮೆಯನ್ನು ತಂದು ಪಂಚಾಮೃತದಿಂದ ಅರ್ಚಿಸಿ, ಪುರಾಣಶ್ರವಣ ಮಾಡಿ, ಜಾಗರಣ ಮಾಡಿ, ಮಾರನೇ ದಿನ ಬ್ರಾಹ್ಮಣರನ್ನು ಭೋಜನಕ್ಕೆ ಆಮಂತ್ರಿಸಿ, ಭೋಜನ ಮಾಡಿಸಬೇಕು.

- ಸುಗ್ರೀವನು ತನ್ನ ಅಣ್ಣನನ್ನು ಕೊಂದ ಪಾಪಪರಿಹಾರಕ್ಕಾಗಿ ಶ್ರೀರಾಮನ ಅನುಜ್ಞೆಯಂತೆ ಧಾರಣ–ಪಾರಣ ವ್ರತವನ್ನು ಮಾಡಿದನು.
- ಹಿಂದಿನ ಜನ್ಮದಲ್ಲಿ ನಾರದರು ಈ ವ್ರತವನ್ನು ಮಾಡಿದ್ದರಿಂದ ಜಿತೇಂದ್ರಿಯರಾಗಿರುವರು.

- ಬಂಧು-ಬಾಂಧವರ ವಧನಿಮಿತ್ತವಾಗಿ ದು:ಖಗೊಂಡಿದ್ದ ಧರ್ಮರಾಜನು ಈ ಧಾರಣ-ಪಾರಣವನ್ನು ಮಾಡಿ ಸರ್ವಪಾಪದಿಂದ ಮುಕ್ತನಾದನು.

**ಪರಾಕವ್ರತ** - ಸರ್ವಪಾಪ ಪ್ರಾಯಶ್ಚಿತ್ತ ರೂಪವಾದ ಪರಾಕವ್ರತವನ್ನು ೧೨ ದಿನಗಳ ಕಾಲ ಉಪವಾಸವಿದ್ದು ಮಾಡಬೇಕು. ಇದೇ ರೀತಿ ಮೂರು ವರ್ಷ ಆಚರಿಸಬೇಕು. ಒಟ್ಟು ಮೂರು ವರ್ಷಗಳಿಂದ ೩೭ ದಿನ ಉಪವಾಸ ಮಾಡಿದಂತಾಗಿ ಬ್ರಹ್ಮಹತ್ಯಾದಿ ಸಮಸ್ತಪಾಪಗಳೂ ಪರಿಹಾರವಾಗುವುದು.

**ಲಕ್ಷ ತುಳಸೀ ಪ್ರದಕ್ಷಿಣೆ** - ಚಾತುಮಾಸ್ಯದಲ್ಲಿ ತುಳಸೀ ದೇವಿಗೆ ಲಕ್ಷಪ್ರದಕ್ಷಿಣೆಯನ್ನು ಹಾಕುವ ವ್ರತ. ವೈಶಾಖ, ಕಾರ್ತೀಕ ಮತ್ತು ಚಾತುರ್ಮಾಸ್ಯಗಳಲ್ಲಿ ಈ ವ್ರತವನ್ನು ಆಚರಿಸಿದರೆ ಬೇಡಿದ ಇಷ್ಟಾರ್ಥಗಳು ಸಿದ್ಧಿಯಾಗುವುವು. ತುಳಸೀ ಲಕ್ಷಪ್ರದಕ್ಷಿಣೆಯನ್ನು ಪ್ರಾತ:ಕಾಲ, ಮಧ್ಯಾಹ್ನ ಹಾಗೂ ಸಾಯಂಕಾಲಗಳಲ್ಲಿ ಮಾಡಬಹುದು.

**ಷಷ್ಟಕಾಲವ್ರತ** - ಚಾತುರ್ಮಾಸ್ಯದಲ್ಲಿ ಆರು ಹೊತ್ತಿಗೊಮ್ಮೆ ಊಟಮಾಡುವ ವ್ರತವೇ ಷಷ್ಟಿಕಾಲವ್ರತ. ಈ ರೀತಿ ಚಾತುರ್ಮಾಸ್ಯ ಪೂರ್ತಿ ನಾಲ್ಕೂ ತಿಂಗಳೂ ಐದು ಉಪವಾಸ, ಆರನೇ ಹೊತ್ತು ಪಾರಣೆ ಮಾಡಬೇಕು. ಇದು ಸಾಧ್ಯವಿಲ್ಲದಿದ್ದರೆ ಕಾರ್ತೀಮಾಸದಲ್ಲಿ ಮಾತ್ರ ಆಚರಿಸಬಹುದು. ಕಾರ್ತೀಕ ಮಾಸದಲ್ಲಿ ಪಾಡ್ಯದಿಂದ ಪ್ರಾರಂಭಿಸಿದರೆ, ಪಾಡ್ಯದಂದು ಹಗಲು-ರಾತ್ರಿ ಉಪವಾಸಗಳು, ದ್ವಿತೀಯಾ ದಿನದಂದು

ಹಗಲು-ರಾತ್ರಿ, ತೃತೀಯಾದನದಲ್ಲಿ ಹಗಲು ಉಪವಾಸ, ರಾತ್ರಿ ನಕ್ಷತ್ರ ಮಂಡಲ ದರ್ಶನನಂತರ ಪಾರಣೆ ಮಾಡುವುದು. ಹೀಗೆ ಆರು ಹೊತ್ತುಗಳಲ್ಲಿ ಒಂದು ಹೊತ್ತು ಮಾತ್ರ ಪಾರಣೆ ಮಾಡುವುದೇ ಷಷ್ಟಕಾಲ ವ್ರತ.

# ಶಾಕವ್ರತ – ಆಷಾಡ ಶುಕ್ಲ ದ್ವಾದಶಿ – ಶ್ರಾವಣ ಶುಕ್ಲ ಏಕಾದಶಿ

**ಸಂಕಲ್ಪ :-**

ಶಾಕವ್ರತಂ ಮಯಾದೇವ ಗೃಹೀತಂ ಪುರತಸ್ತವ ।
ನಿರ್ವಿಘ್ನಂ ಸಿದ್ಧಿಮಾಯಾತು ಪ್ರಸಾದಾತ್ ತವ ಕೇಶವ ॥

ತರಕಾರಿಗಳು, ಹಣ್ಣುಗಳು, ಕಾಂಡ-ಬೇರು, ದಂಟು, ತೊಗಟೆ, ಎಲೆ-ಸೊಪ್ಪುಗಳು, ಮೆಂತ್ಯ ಸೊಪ್ಪು, ಹಸಿಕೊಬ್ಬರಿ, ಒಣಕೊಬ್ಬರಿ, ಹಸಿ ಶುಂಠಿ ಇತ್ಯಾದಿ ತಿನ್ನಬಾರದು.

**ಶಾಕದಲ್ಲಿ ಸ್ವೀಕರಿಸಬಹುದಾದ ಆಹಾರಪದಾರ್ಥಗಳು –** ಒಣಗಿದ ನೆಲ್ಲಿಕಾಯಿ, ಮಾವಿನಹಣ್ಣು, ಮಾವಿನ ಬಾಳಕ, ಅಗಸೇ ಸೊಪ್ಪು ಇವುಗಳನ್ನು ಸ್ವೀಕರಿಸಬಹುದು. ಬೇಳೆಗಳು, ಮೆಣಸು, ಜೀರಿಗೆ, ಹಾಲು,ಮೊಸರು, ಜೇನುತುಪ್ಪ, ತುಪ್ಪ, ಇಂಗು, ಒಣನೆಲ್ಲಿ, ತಾಂಬೂಲ, ಸಾಸಿವೆ (ರಾಯರ ಮಠದವರು ಮಾತ್ರ), ಒಣಶುಂಠಿ, ಕಡಲೇಬೇಳೆ (ಟೀಕಾರಾಯರ ಪಂಚಮಿ ನಂತರ)

## ದಧಿವ್ರತ (ಶ್ರಾವಣ ಶುಕ್ಲ ದ್ವಾದಶಿ – ಭಾದ್ರಪದ ಶುಕ್ಲ ಏಕಾದಶಿ)

– ದಧಿಯನ್ನು ಭಗವಂತನಿಗೆ ಅರ್ಪಿಸುವುದು, ಪಂಚಾಮೃತಕ್ಕಾಗಿ ಉಪಯೋಗಿಸುವುದು, ಭಕ್ಷಿಸುವುದು ನಿಷಿದ್ಧ.

ದಧಿವ್ರತ ಸಂಕಲ್ಪ : –

**ಉಪಾಯನಮಿದಂ ದೇವ ವ್ರತಸಂಪೂರ್ತಿಹೇತವೇ ।**

**ದ್ವಿಜವರ್ಯಾಯ ದಾಸ್ಯೇऽಹಂ ಸಹಿರಣ್ಯಂ ಘನಂ ದಧಿ ॥**

— ಮೊಸರು – ಇದನ್ನು ಉತ್ತರಾಯಣದಲ್ಲಿ ಬಳಸಿದರೆ ಅಧಿಕ ಉಷ್ಣದಿಂದಾಗಿ ಆರೋಗ್ಯವು ಕೆಡುತ್ತದೆ. ಶಾಸ್ತ್ರೀಯರೀತ್ಯಾ ಭಗವಂತನ ಪ್ರೀತಿಗೆ ತ್ಯಜಿಸುವುದು. ಇತರ ದಿನಗಳಲ್ಲಿಯೂ ಮೊಸರು ತಿನ್ನಲು ಉಷ್ಣವರ್ಧಕವಾಗಿದೆ. ರಾತ್ರಿಯಂತೂ ಮೊಸರನ್ನು ತಿಂದರೆ ಆಯಸ್ಸು ಕ್ಷೀಣವಾಗುತ್ತದೆ (ಎಲ್ಲಾ ಕಾಲದಲ್ಲಿಯೂ). ದಧಿವ್ರತಕಾಲದಲ್ಲಿವೊಸರನ್ನು ತಿಂದರೆ ಗೋಮಾಂಸವನ್ನು ಭಕ್ಷಿಸಿದ ಪಾಪಕ್ಕೆ ಗುರಿಯಾಗುವರು. ದಧಿವ್ರತಕಾಲದಲ್ಲಿ ಜಗತ್ತಿನ ಸಮಸ್ತ ಪಾಪಗಳೂ ಮೊಸರಿನಲ್ಲಿರುತ್ತವೆ, ಮೊಸರನ್ನು ತಿಂದವನು ಸಮಸ್ತ ಪಾಪಗಳನ್ನೇ ತಿಂದಂತೆ.

## ಕ್ಷೀರವ್ರತ – – (ಭಾದ್ರಪದ ಶುಕ್ಲ ದ್ವಾದಶಿ – ಆಶ್ವೀಜ ಶುಕ್ಲ ಏಕಾದಶಿ)

**ಕ್ಷೀರವ್ರತ ಸಂಕಲ್ಪ** :–

**ಕ್ಷೀರವ್ರತಮಿದಂ ದೇವ ಗೃಹೀತಂ ಪುರತಸ್ತವ ।**

**ನಿರ್ವಿಘ್ನಂ ಸಿದ್ಧಿಮಾಯಾತು ಪ್ರಸಾದಾತ್ ರಮಾಪತೇ ॥**

ಈ ಕಾಲದಲ್ಲಿ ಭಗವಂತನಿಗೆ ಹಾಲನ್ನು ನಿವೇದಿಸುವುದು, ಕುಡಿಯುವುದು ನಿಷಿದ್ಧ. ಗೋವಿನ ಹಾಲಿನಲ್ಲಿ ಈ ತಿಂಗಳು ಪೂರ್ತಿ ಮನುಷ್ಯರ

ಆರೋಗ್ಯವನ್ನು ಹಾಳು ಮಾಡುವ ವಸ್ತುವಿರುತ್ತದೆ. ಬರೀ ಹಸು ಮಾತ್ರವಲ್ಲ, ಬೇರೆ ಯಾವುದೇ ಪ್ರಾಣಿಗಳ ಹಾಲನ್ನೂ ಬಳಸಬಾರದು. ಕುಡಿದರೆ ಸುರೆಯನ್ನು ಕುಡಿದ ಪಾಪಕ್ಕೆ ಭಾಗಿಯಾಗುವೆವು. ಪಾಯಸಾದಿಗಳಿಗೆ ಹಾಲನ್ನು ಉಪಯೋಗಿಸಬೇಕಾದಲ್ಲಿ ತೆಂಗಿನಕಾಯಿಯ ಹಾಲನ್ನು ಉಪಯೋಗಿಸಬಹುದು.

## ದ್ವಿದಳ ವ್ರತ – (ಆಶ್ವೀಜ ಶುಕ್ಲ ದ್ವಾದಶಿ – ಕಾರ್ತೀಕ ಶುಕ್ಲ ದಶಮಿ)

**ದ್ವಿದಳವ್ರತ ಸಂಕಲ್ಪ :-**

**ಉಪಾಯನಮಿದಂ ದೇವ ವ್ರತಸಂಪೂರ್ತಿ ಹೇತವೇ ।**

**ದ್ವಿದಲಂ ದ್ವಿಜವರ್ಯಾಯ ಸಹಿರಣ್ಯಂ ದದಾಮ್ಯಹಮ್ ॥**

ಅಂಕುರವು ಬಂದಾಗ ಗಿಡದಲ್ಲಿ ಎರಡು ಬೀಜಗಳು (ಉದಾ– ಹುರಳೀಕಾಯಿ) ಕಾಣಿಸಿದರೆ, ಬೀಜವನ್ನು ಹುರಿದಾಗ ಎರಡು ದಳಗಳು (ಉದಾ – ಕಳ್ಳೇಕಾಯಿಬೀಜ) ಯಾವ ಧಾನ್ಯದಲ್ಲಿ ಕಾಣಿಸುವುದೋ ಅವು ದ್ವಿದಳಗಳು.

**ಬಹುಬೀಜ ಲಕ್ಷಣ** – ಯಾವ ಕಾಯಿಯಲ್ಲಾಗಲೀ, ಹಣ್ಣುಗಳಲ್ಲಾಗಲೀ, ಶಾಕದಲ್ಲಾಗಲೀ, ಬಹಳ ಬೀಜಗಳು ಒಳಗಿದ್ದು ಹೊರಗೆ ಒಂದೇ ಸಿಪ್ಪೆ ಇರುವುದೋ ಅಂತಹ ದಪ್ಪ ತೊಗಟೆ, ತೆಳು ಸಿಪ್ಪೆಗಳಿಂದ ಆವೃತವಾಗಿರುವ ಹಣ್ಣು (ಸೀತಾಫಲ, ರಾಮಫಲ, ಚೇಪೆ, ಹಲಸು, ಸಪೋಟ, ಮೂಸಂಬಿ, ಕಿತ್ತಲೆ, ಇತ್ಯಾದಿ). ತರಕಾರಿಯಲ್ಲಿ ಸೌತೇಕಾಯಿ, ಪಡವಲಕಾಯಿ, ಹಾಗಲಕಾಯಿ, ತೊಂಡೇಕಾಯಿ, ಬೆಂಡೇಕಾಯಿ, ಮೆಣಸಿನಕಾಯಿ, ಹೀರೇಕಾಯಿ, ಹುರಳೀಕಾಯಿ, ಆಲೂಗಡ್ಡೆ ಇತ್ಯಾದಿ.

**ದ್ವಿದಳ ಧಾನ್ಯಗಳು** – ಕಲ್ಲಿನಿಂದ ಒಡೆದಾಗ ಇಬ್ಭಾಗವಾಗುವ ಯಾವ ಧಾನ್ಯಗಳಿವೆಯೋ ಅವೆಲ್ಲ ದ್ವಿದಳಗಳು – ಉದಾ – ಉದ್ದು, ಹೆಸರು, ಕಡಲೇ, ಮಸೂರ, ಹುರಳೀ, ಸಾಸಿವೆ, ಮೆಂತ್ಯ, ಗೋಡಂಬಿ, ಬಾದಾಮಿ, ಅವರೆ, ತೊಗರೀ, ಅಲಸಂದೆ, ಹುಣಿಸೇಹಣ್ಣು, ಏಲಕ್ಕಿ. ದ್ವಿದಳವ್ರತ ಕಾಲದಲ್ಲಿ ನಿಷಿದ್ಧ ದ್ವಿದಳವನ್ನು ತಿಂದರೆ ಕ್ರಿಮಿಕೀಟಗಳನ್ನು ತಿಂದ ಪಾಪಕ್ಕೆ ಭಾಗಿಯಾಗುವರು.

**ಸ್ವೀಕಾರಾರ್ಹ** – ದಂಟಿನಸೊಪ್ಪು, ಅಗಸೆಸೊಪ್ಪು, ಹಸಿಶುಂಠಿ, ಸುವರ್ಣಗಡ್ಡೆ, ಗೆಣಸು, ಬಾಳೇಕಾಯಿ, ಬಾಳೆಹೂವು, ಬಾಳೇದಿಂಡು, ಸಾಮೆಗೆಡ್ಡೆ, ಗೆಣಸು, ತೆಂಗಿನಕಾಯಿ, ಬಾಳೇಹಣ್ಣು ಬಹುಬೀಜಫಲವಾದರೂ ಈಗಾಗಲೇ ಶಾಕವ್ರತದಲ್ಲಿ ತ್ಯಜಿಸಿ ಭಗವಂತನಿಗೆ ಅರ್ಪಿಸಿರುವುದರಿಂದ ಉಪಯೋಗಿಸಲು ಅರ್ಹ. ತೀರ್ಥಕ್ಕೆ ಕೇಸರಿ, ಪಚ್ಚಕರ್ಪೂರವೂ ಉಪಯೋಗಿಸಬಹುದು.

**ಸಂಗ್ರಹ – ನರಹರಿ ಸುಮಧ್ವ**

**(ಆಧಾರ – ಚತುರ್ವೇದಿ ವೇದವ್ಯಾಸಾಚಾರ್ಯರ – ಚೈತ್ರಾದಿಮಾಸಗಳು)**